MAY 31, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ರಾಜ್ಯದ 18ನೇ ಮುಖ್ಯಮಂತ್ರಿಯಾಗಿ,** ಡಿ.ಕೆ.ಶಿವಕುಮಾರ, ಜೂನ್ 3 ರಂದು, ಪ್ರಮಾಣವಚನ.
- **ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್;** ಇಂದು ಧರ್ಮಸ್ಥಳದಲ್ಲಿ, ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಉದ್ಘಾಟನೆ.
- **ಯಾದಗಿರಿ ನಗರದ ಕಲುಷಿತ ನೀರು,** ನೇರವಾಗಿ ಭೀಮಾ ನದಿಗೆ; ಉಪ ಲೋಕಾಯುಕ್ತರಿಂದ, ಸ್ವಯಂಪ್ರೇರಿತ ದೂರು.
- **ಇಂದು, ವಿಶ್ವ ತಂಬಾಕು** ಮುಕ್ತ, ದಿನಾಚರಣೆ.
- **ಪ್ರಧಾನಮಂತ್ರಿಯವರಿಂದ,** ಇಂದು ಬೆಳಗ್ಗೆ 11 ಗಂಟೆಗೆ, 'ಮನ್ ಕಿ ಬಾತ್'.

<><><>

**ಈಗ ವಾರ್ತೆಗಳ ವಿವರ**

<><><>

**ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ**ಆಯ್ಕೆಯಾಗಿರುವ, ಡಿ.ಕೆ.ಶಿವಕುಮಾರ, ಪಕ್ಷದ ಹಿರಿಯ ಮುಖಂಡರೊಂದಿಗೆ, ಲೋಕಭವನದಲ್ಲಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, ಸರ್ಕಾರ ರಚನೆಯ ಹಕ್ಕು ಮಂಡಿಸಿದರು. ರಾಜ್ಯಪಾಲರು, ಒಪ್ಪಿಗೆ ಸೂಚಿಸಿದ್ದು, ಜೂನ್ 3 ರಂದು ಸಂಜೆ 4 ಗಂಟೆ 5 ನಿಮಿಷಕ್ಕೆ, ಪ್ರಮಾಣ ವಚನ ಸಮಾರಂಭ, ಲೋಕ ಭವನದಲ್ಲಿ ನಿಗದಿಯಾಗಿದೆ. ರಾಜ್ಯಪಾಲರು ಪ್ರಮಾಣವಚನ ಬೋಧಿಸಲಿದ್ದು, ಡಿ.ಕೆ.ಶಿವಕುಮಾರ, ರಾಜ್ಯದ 18ನೇ ಮುಖ್ಯಮಂತ್ರಿಯಾಗಿ, ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಬಳಿಕ, ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ, ಕೆ.ಸಿ. ವೇಣುಗೋಪಾಲ, ಬೆಂಗಳೂರಿನಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

<><><>

**ಕೆ.ಸಿ. ವೇಣುಗೋಪಾಲ ಧ್ವನಿ 27 ಸೆಕೆಂದುಗಳು**

<><><>

**ದಕ್ಷಿಣಕನ್ನಡ ಜಿಲ್ಲೆ, ಬೆಳ್ತಂಗಡಿಯ,** ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯ, ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್‌ನ್ನು, ಇಂದು ಬೆಳಗ್ಗೆ 10 ಗಂಟೆಗೆ, ಧರ್ಮಸ್ಥಳದ ಅಮೃತವರ್ಷಿಣಿ ಸಭಾ ಭವನದಲ್ಲಿ, ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಉದ್ಘಾಟಿಸಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯ ಅಧ್ಯಕ್ಷ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ಡಾಕ್ಟರ್ ಡಿ. ವೀರೇಂದ್ರ ಹೆಗ್ಗಡೆ, ಪಾಲ್ಗೊಳ್ಳಲಿದ್ದಾರೆ. 7 ಎಕರೆ ಪ್ರದೇಶದಲ್ಲಿ, ಒಂದೂವರೆ ಲಕ್ಷ ಚದರ ಅಡಿಯಷ್ಟು ವಿಸ್ತಾರವಾದ, ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್, ಗ್ರಾಮೀಣ ಭಾಗದ, ಆರ್ಥಿಕವಾಗಿ ಹಿಂದುಳಿದ, 700ಕ್ಕೂ ಅಧಿಕ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿದೆ. ಡಾಕ್ಟರ್ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಹೇಮಾವತಿ ಹೆಗ್ಗಡೆ ಅವರ ಸಂಕಲ್ಪದಂತೆ, ನಿರ್ಮಾಣಗೊಂಡ, ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಿರಿ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಜನಾರ್ಧನ.

<><><>

**ಕೆ.ಎನ್.ಜನಾರ್ಧನ ಧ್ವನಿ 45 ಸೆಕೆಂದುಗಳು**

<><><>

**ಯಾದಗಿರಿ ನಗರದ ಕಲುಷಿತ ನೀರು,** ನೇರವಾಗಿ ಭೀಮಾ ನದಿಗೆ ಸೇರುತ್ತಿದ್ದು, ಅನುಮೋದಿತ, 80 ಕೋಟಿ ರೂಪಾಯಿ ವೆಚ್ಚದ, ಶುದ್ಧೀಕರಣ ಯೋಜನೆಯನ್ನು, ಮುಂಬರುವ ಒಂದು ವಾರದೊಳಗೆ, ಅನುಷ್ಠಾನಕ್ಕೆ ಕ್ರಮ ಕೈಗೊಂಡು, ವರದಿ ಸಲ್ಲಿಸುವಂತೆ, ಉಪ ಲೋಕಾಯುಕ್ತ, ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ನಗರಾಭಿವೃದ್ಧಿ ಕೋಶ, ನಗರಸಭೆ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು, ಒಂದು ವಾರದೊಳಗೆ, ಸ್ಥಳ ಪರಿಶೀಲನೆ ನಡೆಸಿ, ಅನು  ್ಠಾನಗೊಳ್ಳಬೇಕಾದ ಕ್ರಮಗಳ ಕುರಿತು, ತಮಗೆ ಸಮಗ್ರ ವರದಿ ಸಲ್ಲಿಸುವಂತೆ, ನಿರ್ದೇಶಿಸಿದರು. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ, ಗಂಭೀರ ವಿ  ’ಯವಾಗಿದ್ದು, ಲೋಕಾಯುಕ್ತ ಸಂಸ್ಥೆ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದು, ಮುಂದಿನ ಬೆಳವಣಿಗೆಗಳ ಮೇಲೆ ನಿಗಾ ವಹಿಸಲಿದೆ ಎಂದು, ಕೆ.ಎನ್.ಫಣೀಂದ್ರ ತಿಳಿಸಿದರು.

<><><>

**ಸಂಸ್ಕೃತಿ, ಸಂಗೀತ, ಕಲೆ, ಯೋಗದಲ್ಲಿ,** ನಮ್ಮ ಅಸ್ಮಿತೆ ಇದೆ; ನಮ್ಮತನ, ನಮ್ಮ ಸಂಸ್ಕೃತಿಗೆ ಆದ್ಯತೆ ನೀಡಬೇಕು ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಹೇಳಿದ್ದಾರೆ. ಧಾರವಾಡ, ಸತ್ತೂರಿನ ಡಾಕ್ಟರ್ ಡಿ.ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ, ಧಾರವಾಡ ಲೋಕಸಭಾ ಕ್ಷೇತ್ರದ, ಸಂಸದರ ಸಾಂಸ್ಕೃತಿಕ ಮಹೋತ್ಸವದ ಅಂಗವಾಗಿ, ರಾಷ್ಟ್ರೀಯ ಸಂಗೀತೋತ್ಸವ, ವಸಂತ ಗಾನ ಲಹರಿ ಉದ್ಘಾಟಿಸಿ, ಅವರು ಮಾತನಾಡಿದರು. ವಿದುಷಿ ಕೌಶಿಕಿ ಚಕ್ರವರ್ತಿ, ಪಂಡಿತ ಜಯತೀರ್ಥ ಮೇವುಂಡಿ ಹಾಗೂ ಪಂಡಿತ ಪ್ರವೀಣ ಗೋಡಖಿಂಡಿ ಅವರ ಜುಗಲ್ ಬಂದಿ, ಪಂಡಿತ ಕುಮಾರ ಮರಡೂರ, ವಿದುಷಿ ಅನುಪಮಾ ಭಾಗವತ್, ಅನಿರುದ್ಧ ಐತಾಳ ಹಾಗೂ ನಿಷಾದ ಮತ್ತು ನೌಷಾದ ಹರ್ಲಾಪುರ ಅವರ, ಸಂಗೀತ ಕಚೇರಿಗಳು ಗಮನ ಸೆಳೆದವು.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**“ಆಕ ’೯ಕ ಮುಖವಾಡವನ್ನು ಕಳಚುವುದು;** ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ತೊರೆಯುವುದು**”,** ಎಂಬ ಧ್ಯೇಯದೊಂದಿಗೆ, ಇಂದು, ವಿಶ್ವ ತಂಬಾಕು ಮತ್ತು ಧೂಮಪಾನ ಮುಕ್ತ, ದಿನಾಚರಣೆ. ಇಂದಿನಿಂದ, ಜೂನ್ 30ರ ವರೆಗೆ, ಒಂದು ತಿಂಗಳ ಕಾಲ, ರಾಜ್ಯಾದ್ಯಂತ, ಯುವ ಪೀಳಿಗೆಯನ್ನು ತಂಬಾಕು ಮುಕ್ತಗೊಳಿಸುವ, ಅಭಿಯಾನದ ಆಯೋಜಿತವಾಗಿದೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು,** ನವನಗರದ, ಪದ್ಮಶ್ರೀ ಡಾಕ್ಟರ್ ಆರ್.ಬಿ. ಪಾಟೀಲ, ಕ್ಯಾನ್ಸರ್ ಚಿಕಿತ್ಸೆ ಮತ್ತು ಸಂಶೋಧನಾ ಆಸ್ಪತ್ರೆಯ, ರೋಗಲಕ್ಷಣ ಶಾಸ್ತ್ರ ವಿಭಾಗದ ಮುಖ್ಯಸ್ಥ, ಡಾಕ್ಟರ್ ಉಮೇಶ ಹಳ್ಳಿಕೇರಿ, ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಡಾಕ್ಟರ್ ಉಮೇಶ ಹಳ್ಳಿಕೇರಿ ಧ್ವನಿ 50 ಸೆಕೆಂದುಗಳು**

<><><>

**ಆಕಾಶವಾಣಿಯ, ಜನಪ್ರಿಯ ಮಾಸಿಕ** ಕಾರ್ಯಕ್ರಮ, **‘**ಮನ್ ಕಿ ಬಾತ್**’**ನಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ದೇಶ ವಿದೇಶಗಳ ಭಾರತೀಯರನ್ನುದ್ದೇಶಿಸಿ, ತಮ್ಮ ಮನದ ಮಾತು, ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್ ನ 134ನೇ ಆವೃತ್ತಿಯಾಗಿದೆ. ಹಿಂದಿ ಅವತರಣಿಕೆ ಬಳಿಕ, 11.30ಕ್ಕೆ, ಕನ್ನಡ ಸೇರಿದಂತೆ, ಇತರೆ ಪ್ರಾದೇಶಿಕ ಭಾ ’ಗಳಲ್ಲಿ, ಕಾರ್ಯಕ್ರಮ ಬಿತ್ತರಗೊಳ್ಳಲಿದೆ. ಆಕಾಶವಾಣಿ ಹಾಗೂ ದೂರದರ್ಶನದ, ಎಲ್ಲ ವಾಹಿನಿಗಳು, ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್, ಪ್ರಧಾನಮಂತ್ರಿ ಕಚೇರಿ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ, ಯೂಟ್ಯೂಬ್ ವಾಹಿನಿಯಲ್ಲಿಯೂ, ನೇರ ಪ್ರಸಾರವಾಗಲಿದೆ.

<><><>

**ರಾಜ್ಯದ ಒಟ್ಟು 6 ಸಾವಿರ ಗ್ರಾಮ ಪಂಚಾಯಿತಿಗಳ ಪೈಕಿ,** 4 ಸಾವಿರ ಗ್ರಾಮ ಪಂಚಾಯಿತಿಗಳಲ್ಲಿ, ಮಹಿಳಾ ಸ್ವ–ಸಹಾಯ ಗುಂಪುಗಳನ್ನು, **‘**ಸ್ವಚ್ಛತಾ ವಾಹಿನಿ**’**ಗಳನ್ನಾಗಿ, ನಿಯೋಜಿಸಲಾಗಿದೆ; ಘನ ತ್ಯಾಜ್ಯ ನಿರ್ವಹಣೆ ನಿಯಮಗಳ ಬಗ್ಗೆ, ಸೂಕ್ತ ತರಬೇತಿ ನೀಡಲಾಗುವುದು ಎಂದು, ರಾಜ್ಯ ಮುಖ್ಯ ಕಾರ್ಯದರ್ಶಿ, ಡಾಕ್ಟರ್ ಶಾಲಿನಿ ರಜನೀಶ, ತಿಳಿಸಿದ್ದಾರೆ. ಬೆಂಗಳೂರಿನ, ವಿಧಾನಸೌಧದಲ್ಲಿ, ಘನ ತ್ಯಾಜ್ಯ ನಿರ್ವಹಣೆ ನಿಯಮಗಳು–2026ರ ಕಾರ್ಯಾಗಾರದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಮನೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ, ನಿತ್ಯ ಉತ್ಪತ್ತಿಯಾಗುವ ಸಾವಿರಾರು *ಟೋನರ್ಸ್ ಪರ್ ಡೇ* ಘನ ತ್ಯಾಜ್ಯವನ್ನು, ನಾಲ್ಕು ವಿಧದಲ್ಲಿ, ವೈಜ್ಞಾನಿಕವಾಗಿ ನಿರ್ವಹಿಸುವಂತೆ, ಮ್ಯಾಪಿಂಗ್ ವ್ಯವಸ್ಥೆ ರೂಪಿಸಬೇಕು, ‘Waste to Energy’, ‘Waste to Wealth’ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

<><><>

**ಧಾರವಾಡ ತಾಲೂಕು, ಸಿಂಗನಳ್ಳಿ ಗ್ರಾಮದ,** ಕರೆಮ್ಮನ ಕೆರೆಯಲ್ಲಿ ಈಜಲು ಹೋಗಿ, ಮೂವರು ಬಾಲಕರು, ಮುಳುಗಿ ಮೃತಪಟ್ಟ ದುರ್ಘಟನೆ, ನಡೆದಿದೆ. ಸಿಂಗನಳ್ಳಿ ಗ್ರಾಮದ, 13 ವರ್ಷದ ಅನ್ವರ ಇಬ್ರಾಹಿಂ ವಟ್ನಾಳ, 12 ವರ್ಷದ ಸುಭಾನಿ ಬಾಗಜಿಕೊಪ್ಪ, 15 ವರ್ಷದ ಮೆಹಬೂಬಸುಭಾನಿ ವಟ್ನಾಳ, ಮೃತಪಟ್ಟ ಬಾಲಕರು.

<><><>

**ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ,** ತಂತ್ರಾಂಶ ಅಭಿವೃದ್ಧಿ ಹಾಗೂ ಅನುಷ್ಠಾನದಲ್ಲಿ ತೋರಿದ ಅತ್ಯುತ್ತಮ ಸಾಧನೆಗಾಗಿ, 'Excellence in Cloud Adoption' ರಾಷ್ಟ್ರೀಯ ಪ್ರಶಸ್ತಿಗೆ, ಭಾಜನವಾಗಿದೆ. ಗದಗ ವಿಭಾಗೀಯ ಸಂಚಾರ ಅಧಿಕಾರಿ ಪಡಿಯಪ್ಪ ಮೇತ್ರಿ, ಹೊಸ ದಿಲ್ಲಿಯಲ್ಲಿ ಪ್ರಶಸ್ತಿ ಸ್ವೀಕರಿಸಿದರು.

<><><>

**ರಾಜ್ಯ ರಸ್ತೆ ಸಾರಿಗೆ ನಿಗಮಗಳು,** ಪ್ರಸಕ್ತ ಶೈಕ್ಷಣಿಕ ವರ್ಷದ, ಉಚಿತ ಹಾಗೂ ರಿಯಾಯಿತಿ ವಿದ್ಯಾರ್ಥಿ ಬಸ್ ಪಾಸ್ ವಿತರಣೆ, ಮೊನ್ನೆ 29 ರಿಂದ ಆರಂಭಿಸಿದ್ದು, ಸೇವಾಸಿಂಧು ಪೋರ್ಟಲ್ ನಲ್ಲಿ, ಆನ್ ಲೈನ್ ಅರ್ಜಿ ಸಲ್ಲಿಸಲು, ಕೋರಿವೆ.

<><><>

**ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ,** ಇಂದು ಸಂಜೆ 7.30ಕ್ಕೆ, ಐ.ಪಿ.ಎಲ್. ಟಿ–20 ಕ್ರಿಕೆಟ್ ಫೈನಲ್ ಪಂದ್ಯದಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟನ್ಸ್, ಮುಖಾಮುಖಿಯಾಗಲಿವೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಜ್ಯದ 18ನೇ ಮುಖ್ಯಮಂತ್ರಿಯಾಗಿ,** ಡಿ.ಕೆ.ಶಿವಕುಮಾರ, ಜೂನ್ 3 ರಂದು, ಪ್ರಮಾಣವಚನ.
- **ಮಾತೃಶ್ರೀ ಇಂಡಸ್ಟ್ರಿಯಲ್ ಪಾರ್ಕ್;** ಇಂದು ಧರ್ಮಸ್ಥಳದಲ್ಲಿ, ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಉದ್ಘಾಟನೆ.
- **ಯಾದಗಿರಿ ನಗರದ ಕಲುಷಿತ ನೀರು,** ನೇರವಾಗಿ ಭೀಮಾ ನದಿಗೆ; ಉಪ ಲೋಕಾಯುಕ್ತರಿಂದ, ಸ್ವಯಂಪ್ರೇರಿತ ದೂರು.
- **ಇಂದು, ವಿಶ್ವ ತಂಬಾಕು** ಮುಕ್ತ, ದಿನಾಚರಣೆ.
- **ಪ್ರಧಾನಮಂತ್ರಿಯವರಿಂದ,** ಇಂದು ಬೆಳಗ್ಗೆ 11 ಗಂಟೆಗೆ, **'ಮನ್ ಕಿ ಬಾತ್'.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>